ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦ ೨೪
ಸಂಚಿಕೆ : ೦೪

(ಖಾಸಗಿ ಪ್ರಸಾರಕ್ಕಾಗಿ ಮಾತ್ರ)

ಅಕ್ಟೋಬರ್-ಡಿಸೆಂಬರ್ ೨೦೧೨

ಸಂಪಾದಕರು
ಎಸ್.ವಿ. ಶ್ರೀನಿವಾಸರಾ

ಪರಿವಿಡಿ

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦ ೦೧೯

ದೂರವಾಣಿ: ೨೬೬೧೫೪೮೭೭
೨೬೬೭೬೭೭೩

ಇಮೇಲ್ : bmsritrust@gmail.com

ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ.

'ಸಾಹಿತ್ಯೋಪಾಸಕರು ಲೇಖನ ಮಾಲೆ'



ದಿನಾಂಕ 31-10-2012 ರಂದು ಬುಧವಾರ ಸಂಜೆ 5-30ಕ್ಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬಿ.ಎಂ.ಶ್ರೀ ಕಲಾಭವನದಲ್ಲಿ 'ಸಾಹಿತ್ಯೋಪಾಸಕರು ಲೇಖನ ಮಾಲೆ' ಕಾರ್ಯಕ್ರಮ ಆಯೋಜಿಸಿತ್ತು.

ಡಾ॥ ಪ್ರಮೀಳಾ ಮಾಧವ, ನಿವೃತ್ತ ಕನ್ನಡ ಪ್ರಾಧ್ಯಾಪಕರು 'ಕನ್ನಡ ಸಾಹಿತ್ಯಕ್ಕೆ ಎಂ. ಗೋವಿಂದ ಪೈಯವರ ಕೊಡುಗೆ' ಬಗ್ಗೆ, ಡಾ॥ ಬೈರಮಂಗಲ ರಾಮೇಗೌಡ, ಕನ್ನಡ ಪ್ರಾಧ್ಯಾಪಕರು 'ಕನ್ನಡ ಸಾಹಿತ್ಯಕ್ಕೆ ಬಿ.ಎಂ.ಶ್ರೀಯವರ ಕೊಡುಗೆ' ಬಗ್ಗೆ ಬಹಳ ಉಪಯುಕ್ತ ಮಾಹಿತಿ ನೀಡಿದರು. ಪ್ರತಿಷ್ಠಾನದ ಗೌ॥ ಅಧ್ಯಕ್ಷರಾದ ಪ್ರೊ॥ ಎಂ. ಎಚ್. ಕೃಷ್ಣಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಗೌ॥ ಕಾರ್ಯದರ್ಶಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ಪ್ರಾಸ್ತಾವಿಕ ಭಾಷಣವಾಗಿ ಸಾಹಿತ್ಯೋಪಾಸಕರು ಲೇಖನಮಾಲೆಯ ಆಶಯ ವಿವರಿಸಿ 19ನೇ ಶತಮಾನದ ಪ್ರಾತಃಸ್ಮರಣೀಯರ ಕೊಡುಗೆಗಳನ್ನು ದಾಖಲಿಸುವ ಕೆಲಸವನ್ನು 2001 ರಿಂದ ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ ಎಂದು ತಿಳಿಸಿದರು. ಪ್ರೊ॥ ಜಿ. ಅಬ್ದುಲ್ ಬಷೀರ್ ಅವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ವಂದನೆ ಸಲ್ಲಿಸಿದರು.

ಸಂಪಾದಕೀಯ

ಪ್ರತಿಷ್ಠಾನದ ಎಲ್ಲಾ ಸನ್ಮಾನ್ಯ ಸದಸ್ಯರುಗಳಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳನ್ನು ಅರ್ಪಿಸುತ್ತ ತಾವು ನೀಡುತ್ತಿರುವ ಸಹಕಾರ ಹಾಗೂ ಸಹಯೋಗಕ್ಕಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

೧೯೭೬ ರಲ್ಲಿ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ತಮ್ಮ ಗುರು ನಾಡೋಜ ಡಾ॥ ಬಿ. ಎಂ. ಶ್ರೀಕಂಠಯ್ಯ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಈ ಸಂಸ್ಥೆ, ಈ ಇಬ್ಬರು ಪ್ರಾತಃಸ್ಮರಣೀಯರು ಹಾಕಿಕೊಟ್ಟಿರುವ ಆದರ್ಶಗಳನ್ನು ಪಾಲಿಸುತ್ತಾ, ನಾಡು ನುಡಿಯ ಏಳಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನ ಗೊಳಿಸಲು ನಿರಂತರ ಶ್ರಮಿಸುತ್ತಿದೆ.

ಪ್ರತಿಷ್ಠಾನದ ನಿಕಟಪೂರ್ವ ಗೌ॥ ಅಧ್ಯಕ್ಷರಾಗಿದ್ದ ನಾಡೋಜ ಜಿ. ನಾರಾಯಣ ಅವರಿಗೆ ಮಕ್ಕಳ ವಿದ್ಯಾಭ್ಯಾಸ ಹಾಗು ಮಾನಸಿಕ ಬೆಳವಣಿಗೆ ಬಗ್ಗೆ ಬಹಳ ಕಾಳಜಿಯಿದ್ದು ಮಕ್ಕಳು ಸತ್ಪ್ರಜೆಗಳಾಗಿ ರೂಪುಗೊಳ್ಳಲು, ಪ್ರಾಚೀನ ಹಾಗೂ ಅರ್ವಾಚೀನ ಸಾಹಿತ್ಯದ ಸ್ವಾದನೀಯ ಅಂಶಗಳನ್ನು ಅರಿತಿರಬೇಕೆಂದು ಆಶಿಸುತ್ತಿದ್ದರು, ಇಂತಹ ಸಾಹಿತ್ಯದ ಆಯ್ದ ನುಡಿ ಮುತ್ತುಗಳನ್ನು ಅವರು ಬಾಯಿಪಾಠ ಮಾಡಿಕೊಂಡು ಆಗಾಗ್ಗೆ ಪಠಿಸುವ ಅವಕಾಶವನ್ನು ಅವರಿಗೆ ಕಲ್ಪಿಸಿಕೊಟ್ಟರೆ ಅವರು ಆದರ್ಶ ಪ್ರಜೆಗಳಾಗಿ ರೂಪುಗೊಳ್ಳಲು ಅದು ನೆರವು ನೀಡುತ್ತದೆ ಎಂದು ಆಶಿಸಿ ಇದಕ್ಕಾಗಿ ಮಕ್ಕಳಿಗೆಂದೇ ಸುಲಭ ಬೆಲೆಯ ಪುಟ್ಟ ಪುಟ್ಟ ಪುಸ್ತಕಗಳನ್ನು ರಚಿಸಿ ಶಾಲೆಗಳಿಗೆ ಹಂಚಬೇಕೆಂಬ ಆಶಿಸಿದ್ದರು. ಈ ದಿಶೆಯಲ್ಲಿ ಪ್ರತಿಷ್ಠಾನ ಪ್ರಾಯೋಗಿಕವಾಗಿ ಒಂದು ಹಳೆಯ ಪ್ರಾಚೀನ ಗ್ರಂಥಗಳಲ್ಲಿನ ರಮ್ಯ ಭಾಗಗಳನ್ನು ಆಯ್ದು ಮಕ್ಕಳ ಬಾಯಿಪಾಠ ಮಾಡಲು ಸುಲಭವೆನಿಸುವ ಪದ್ಯಗಳನ್ನು ಸಂಕಲಿಸಲು ಡಾ॥ ಮುಳುಕುಂಟೆ ರಮೇಶ್ ಅವರನ್ನು ಕೋರಲಾಗಿತ್ತು. ಅವರು ಈಗಾಗಲೇ ಇಂತಹ ಒಂದು ಕೃತಿಯನ್ನು ಸಿದ್ಧಪಡಿಸಿ ನೀಡಿರುತ್ತಾರೆ. ಇದು 'ಪ್ರಾಚೀನ ಕಾವ್ಯ ಸಂಗ್ರಹ' ಎಂಬ ಹೆಸರಿನಲ್ಲಿ ಪ್ರಕಟಗೊಂಡಿದೆ. ಇಂತಹದೇ ಇನ್ನೊಂದು ಕೃತಿಯನ್ನು ಇವರು ಆಧುನಿಕ ಸಾಹಿತ್ಯ ಕೃತಿಗಳಿಂದ ಆಯ್ದು ಸಿದ್ಧಪಡಿಸಲಿದ್ದಾರೆ. ಡಾ॥ ನಾರಾಯಣ ಅವರ ಇನ್ನೊಂದು ಅಪೇಕ್ಷಿತ ಆಶಯ ಪ್ರಾಚೀನ ಗ್ರಂಥಗಳಲ್ಲಿನ ಸವಿನುಡಿಗಳು ಅಂದರೆ ಸೂಕ್ತಿಗಳನ್ನೂ ಸಂಕಲಿಸಿ ಪ್ರಕಟಿಸುವುದು. ಇದೂ ಪ್ರಗತಿಯಲ್ಲಿದೆ.ಪ್ರೊ॥ ಜಿ. ಅಶ್ವತ್ಥನಾರಾಯಣ ಅವರು ಕುಮಾರವ್ಯಾಸ ಭಾರತದಲ್ಲಿನ ಷಟ್ಪದಿ ಕಾವ್ಯಗಳಿಂದ ಆಯ್ದು ಸೂಕ್ತ ಸಂಗ್ರಹ 'ಕುಮಾರವ್ಯಾಸ ಸೂಕ್ತಿಗಳು' ಸಿದ್ಧಪಡಿಸಿದ್ದಾರೆ. ಇದು ಶೀಘ್ರದಲ್ಲಿ ಪುಸ್ತಕ ರೂಪದಲ್ಲಿ ಹೊರಬರಲಿದೆ. ಇಂತಹದೇ ಪ್ರಾಚೀನ ಕವಿಗಳ ಸಾಂಗತ್ಯ, ತ್ರಿಪದಿ, ಹಾಡು, ಕೀರ್ತನೆ ವಿಭಾಗಗಳಿಂದ ಆಯ್ದು 'ಸೂಕ್ತ ಸಂಗ್ರಹ ಹೊರತರಲು ಯೋಜನೆ ಸಿದ್ಧಪಡಿಸಲಾಗಿದೆ. ಸೂಕ್ತ ಸಂಕಲನಕಾರರ ಅನ್ವೇಷಣೆಯಲ್ಲಿದ್ದೇವೆ.

ಗ್ರಂಥಾಲಯದ ಕಂಪ್ಯೂಟರೀಕರಣ, ಹಸ್ತಪ್ರತಿ ವಿಭಾಗದ ಹಸ್ತಪ್ರತಿಗಳ ಸಂರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ. ಹಸ್ತಪ್ರತಿಗಳನ್ನು ಡಿಜಿಟೈಸ್ ಮಾಡಿಸುವ ಕ್ರಿಯೆ ಈಗಾಗಲೇ ಪ್ರಗತಿಯಲ್ಲಿದೆ. ಪ್ರಾಚೀನ ಹಸ್ತಪ್ರತಿಗಳನ್ನು ಹೆಕ್ಕಿ ತೆಗೆದು ಮುಖ್ಯ ಕೃತಿಗಳನ್ನು ಸಂಪಾದಿಸುವ ಕೆಲಸವನ್ನು ಈಗಾಗಲೇ ತಜ್ಞರಿಗೆ ವಹಿಸಿಕೊಡಲಾಗಿದೆ. ಎಂ.ಫಿಲ್., ಪಿಎಚ್.ಡಿ. ಹಳಗನ್ನಡ ಅಧ್ಯಯನ ಹಾಗೂ ಹಸ್ತಪ್ರತಿ ಅಧ್ಯಯನ ವಿದ್ಯಾರ್ಥಿಗಳು ಇವುಗಳ ಉಪಯೋಗವನ್ನು ಹೆಚ್ಚು ಹೆಚ್ಚಾಗಿ ಪಡೆಯಬಹುದಾಗಿದೆ. ಪ್ರತಿಷ್ಠಾನ ನಡೆಸುತ್ತಿರುವ ಈ ಎಲ್ಲಾ ಕಾರ್ಯಕ್ರಮಗಳಿಗೆ ಸಭಿಕರ ಕೊರತೆ ಕಾಡುತ್ತಿದೆ. 'ಸಿರಿ ಸಂಗೀತ' ಹಾಗೂ 'ಸಿರಿಕಂಠ' ವೇದಿಕೆಗಳು ನಡೆಸುತ್ತಿರುವ ಮಾಸಿಕ ಕಾರ್ಯಕ್ರಮಗಳು ಹಾಗೂ ಪ್ರತಿಷ್ಠಾನ ನಡೆಸುತ್ತಿರುವ ದತ್ತಿ ಕಾರ್ಯಕ್ರಮಗಳು, ಸಾಹಿತ್ಯೋಪಾಸಕರು ಉಪನ್ಯಾಸ ಮುಂತಾದವುಗಳಲ್ಲಿ ಸದಸ್ಯರುಗಳು ಹಾಗೂ ಕನ್ನಡಾಭಿಮಾನಿಗಳು ಹೆಚ್ಚು ಹೆಚ್ಚಾಗಿ ಭಾಗವಹಿಸಿ ಉತ್ತೇಜನ ನೀಡಬೇಕೆಂದು ವಿನಮ್ರ ಮನವಿ.

ಸಂಪಾದಕರು

ಎಸ್. ವಿ. ಶ್ರೀನಿವಾರಾವ್

ಪ್ರತಿಷ್ಠಾನದ ವಾರ್ತೆ

ದಿನಾಂಕ 7-11-2012 ರಂದು ಡಾ॥ ಡಿ. ಎಲ್. ನರಸಿಂಹಾಚಾರ್ ದತ್ತಿ ಕಾರ್ಯಕ್ರಮದ ಅಂಗವಾಗಿ ಡಾ॥ ಎಂ.



ಚಿದಾನಂದಮೂರ್ತಿಯವರು 'ಸಂಶೋಧಕರಾಗಿ ಡಾ॥ ಡಿ. ಎಲ್. ಎನ್. ಬಗ್ಗೆ ವಿದ್ವತ್‌ಪೂರ್ಣ ಉಪನ್ಯಾಸ ನೀಡಿದರು. ಅಂದೇ ನಡೆದ ಇನ್ನೊಂದು ಕಾರ್ಯಕ್ರಮ 'ಸಿರಿಕಂಟ' ತಿಂಗಳ ಉಪನ್ಯಾಸ, ಡಾ॥ ಎ. ಕೆ. ಶಾಸ್ತ್ರೀ ಖ್ಯಾತ ಹಿರಿಯ ವಿದ್ವಾಂಸರು, 'ಗ್ರಂಥ ಸಂಪಾದನಾ ಶಾಸ್ತ್ರ ಮತ್ತು ಕಡತಗಳು' ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು. ಡಾ॥ ಎಂ. ಚಿದಾನಂದಮೂರ್ತಿಯರೇ ಈ ಎರಡೂ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ 'ಸಿರಿಕಂಟ' ವೇದಿಕೆಯ ಡಾ॥ ಬೆಂ.ಶಾ. ಶ್ಯಾಮಲಾರತ್ನಕುಮಾರಿಯವರು 'ಸಿರಿಕಂಟ' ವೇದಿಕೆಯ ಹುಟ್ಟು, ಬೆಳವಣಿಗೆಯ ಬಗ್ಗೆ ಮಾಹಿತಿ ನೀಡಿ, ಗ್ರಂಥ ಸಂರಕ್ಷಣೆ, ಸಂಪಾದನೆಯ ಔಚಿತ್ಯಗಳನ್ನು ವಿವರಿಸಿ, ಇವನ್ನು ವೈಜ್ಞಾನಿಕವಾಗಿ ನಿರ್ವಹಿಸುವ ಕಾರ್ಯಭಾರವನ್ನು ಬಿ.ಎಂ.ಶ್ರೀ ಪತಿಷ್ಠಾನ ಬಹು ಅಚ್ಚುಕಟ್ಟಾಗಿ ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು. ಶ್ರೀ ಸುಂಕಂ ಗೋವರ್ಧನ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಡಾ॥ ಪಿ. ವಿ. ಕೃಷ್ಣಮೂರ್ತಿಯವರು ವಂದನಾರ್ಪಣೆ ಮಾಡಿದರು.

ದಿನಾಂಕ 30-11-2012 ರಂದು ಸಂಜೆ 5-30ಕ್ಕೆ



30-11-12 ಸಾಹಿತ್ಯೋಪಾಸಕರು ಕಾರ್ಯಕ್ರಮ

'ಸಾಹಿತ್ಯೋಪಾಸಕರು ಲೇಖನಮಾಲೆ'ಯ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಡಾ॥ ಎಸ್. ವಿ. ಪ್ರಭಾವತಿ ನಿವೃತ್ತ ಕನ್ನಡ ಪ್ರಾಧ್ಯಾಪಕರು, 'ನಂಜನಗೂಡು ತಿರುಮಲಾಂಬ' ಬಗ್ಗೆ; ಪ್ರೊ॥ ಬಿ. ನಾರಾಯಣಮ್ಮ ನಿವೃತ್ತ ಪ್ರಾಂಶುಪಾಲರು, 'ನಾಲ್ವಡಿ ಕೃಷ್ಣರಾಜ ಒಡೆಯರ್' ಬಗ್ಗೆ ಬಹಳ ಉಪಯುಕ್ತ ಮೌಲ್ಯಾಧಾರಿತ ಮಾಹಿತಿ ನೀಡಿದರು. ಪ್ರೊ॥ ಎಂ. ಎಚ್. ಕೃಷ್ಣಯ್ಯ, ಗೌರವಾಧ್ಯಕ್ಷರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀಮತಿ ಮಂಗಳ ಅವರು ಪ್ರಾರ್ಥನೆ ಮಾಡಿದರು. ಶ್ರೀ ಎಸ್. ವಿ. ಶ್ರೀನಿವಾಸರಾವ್ 'ಸಾಹಿತ್ಯೋಪಾಸಕರು ಲೇಖನಮಾಲೆಯ ಬಗ್ಗೆ ಉಪಯುಕ್ತತೆ ಕುರಿತು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಪ್ರೊ॥ ಎಂ. ಎಚ್. ಕೃಷ್ಣಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ॥ ಜಿ. ಅಬ್ದುಲ್ ಬಷೀರ್ ಅವರು ಅತಿಥಿಗಳ ಪರಿಚಯ ಮಾಡಿಸಿಕೊಟ್ಟರು. ಪ್ರೊ॥ ಜಿ. ಅಶ್ವತ್ಥನಾರಾಯಣರವರು ವಂದನಾರ್ಪಣೆ ಮಾಡಿದರು.

ದಿನಾಂಕ 12-12-2012 ಬುಧವಾರ ಸಂಜೆ 4-00 ಗಂಟೆಗೆ ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಬೆಂಗಳೂರು-2 ರಲ್ಲಿ ಅಜಂತಾ ಸಾಂಸ್ಕೃತಿಕ ವಿದ್ಯಾ ಸಂಸ್ಥೆಯ ಸಹಯೋಗದಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪ್ರಕಟಿಸಿರುವ ಆಚಾರ್ಯ ಬಿ.ಎಂ.ಶ್ರೀ ಸಹೋದರಿ ಧೀಮಂತ ಮಹಿಳೆ 'ದಿ॥ ನಂಜಮ್ಮ' ಕೃತಿ ಬಿಡುಗಡೆ ಕಾರ್ಯಕ್ರಮವನ್ನು ನಡೆಸಲಾಯಿತು. ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರು ಪ್ರಸ್ತಾವಿಕ ಭಾಷಣ ಮಾಡಿ, ದಿ॥ ನಂಜಮ್ಮನವರು ಮಾಡಿರುವ ಸಮಾಜಸೇವಾ ಕಾರ್ಯಕ್ರಮಗಳನ್ನು ಪರಿಚಯಿಸಿ, ಅವರ ಕಾರ್ಯ ಕ್ಷಮತೆಯನ್ನು ಸ್ತುತಿಸಿದರು.

ಖ್ಯಾತ ವಿಮರ್ಶಕ, ಸಂಶೋಧಕ, ಇತಿಹಾಸತಜ್ಞ

ಡಾ॥ ಸೂರ್ಯನಾಥ ಕಾಮತ್ ಕಾರ್ಯಕ್ರಮದ ಉದ್ಘಾಟನೆ ನಡೆಸಿ, ಸಮಾಜ ಸೇವಕಿ ನಂಜಮ್ಮನವರ ನಿಸ್ಪೃಹ ಸೇವೆಯನ್ನು ಕೊಂಡಾಡಿದರು. ಗ್ರಂಥ ಬಿಡುಗಡೆ ಮಾಡಿದ ಖ್ಯಾತ ಸಂಶೋಧಕ, ಕನ್ನಡ ಭಾಷೆ, ನೆಲ, ಜಲದ ಬಗ್ಗೆ ನಿರಂತರ ಹೋರಾಟ ನಡೆಸುತ್ತಿರುವ ಡಾ॥ ಎಂ. ಚಿದಾನಂದ ಮೂರ್ತಿಯವರು ಪುಸ್ತಕವನ್ನು ರಚಿಸಿರುವ ಶ್ರೀಮತಿ ಲಕ್ಷ್ಮೀ ಎನ್ ಮೂರ್ತಿಯವರ ಶ್ರಮ ಹಾಗೂ ಶ್ರದ್ಧೆಯನ್ನು ಪ್ರಶಂಸಿಸಿ, ಇಂತಹ ಗ್ರಂಥ ಸಹಸ್ರಾರು ಸಂಖ್ಯೆಯಲ್ಲಿ ಕಡಿಮೆ ಬೆಲೆಯಲ್ಲಿ ಮಾರಾಟವಾಗುವುದು ಅವಶ್ಯಕತೆಯಿದೆ ಎಂದು ತಿಳಿಸಿ ಈ ಬಗ್ಗೆ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಈ ಬಗ್ಗೆ ಸೂಚನೆ ಕೊಡಬಯಸಿರುವುದಾಗಿ ತಿಳಿಸಿದರು. ಸಭಿಕರು ಕರತಾಡನದ ಮೂಲಕ ಈ ಹೇಳಿಕೆಯನ್ನು ಸ್ವಾಗತಿಸಿದರು.

ಕಾರ್ಯದರ್ಶಿ ಪ್ರೊ॥ ಜಿ. ಅಬ್ದುಲ್ ಬಷೀರ್ ಅವರು ವಂದನೆ ಸಲ್ಲಿಸಿದರು. ಕಾರ್ಯಕ್ರಮದ ಉದ್ದಕ್ಕೂ ಶ್ರೀಮತಿ ಲಕ್ಷ್ಮೀ ಎನ್. ಮೂರ್ತಿ ಅವರು ನಿರೂಪಕರಾಗಿ ಬಹಳ ಚೆನ್ನಾಗಿ ಕಾರ್ಯನಿರ್ವಹಿಸಿದರು. ಶ್ರೀಮತಿ ಲಕ್ಷ್ಮಿ ಎನ್. ಮೂರ್ತಿ ಯವರು ಆಗಮಿಸಿದ್ದ ಬಿ.ಎಂ.ಶ್ರೀ ಬಂಧುಗಳನ್ನು ಶಾಲು ಹೊದಿಸಿ ಸನ್ಮಾನಿಸಿದರು. ಈ ಕಾರ್ಯಕ್ರಮ ನಡೆಸಲು ಪ್ರೇರಣೆ ಹಾಗೂ ಪೂರ್ಣ ಪ್ರೋತ್ಸಾಹ ನೀಡಿದ ಶ್ರೀ ಎನ್. ಎಸ್. ಕೃಷ್ಣಸ್ವಾಮಿಯವರಿಗೆ ಕೃತಜ್ಞತೆ ಅರ್ಪಿಸಿ ಅವರನ್ನು

ಸಾದರ–ಸ್ವೀಕಾರ

1. **ರಾಘವ ಅವರ ರಮ್ಯಗೀತೆಗಳು:**
ಲೇಖಕರು: ಎಂ.ವಿ.ಸೀತಾರಾಮಯ್ಯ.
ಸಂಪಾದಕರು :ಶ್ರೀಎಂ.ಎಸ್.ಭಾಸ್ಕರ್.
ಪ್ರಕಾಶಕರು:ಸುಂದರಸಾಹಿತ್ಯಪ್ರಕಾಶನ,5ನೇ ತಿರುವು, ಅ.ನ.ಸು. ರಸ್ತೆ ಹನುಮಂತನಗರ, ಬೆಂಗಳೂರು-9.
ಪ್ರಕಟಣೆ ಮೊದಲ ಮುದ್ರಣ2012.
ಪುಟಗಳು:72,
ಬೆಲೆ-ರೂ. **50/-**

ಪ್ರೊ. ಎಂ.ವಿ. ಸೀತಾರಾಮಯ್ಯ ಅವರ ಸಮಗ್ರ ಕಾವ್ಯ ಸಂಪುಟದಲ್ಲಿ ಸೇರಿಲ್ಲದ ಕವನಗಳನ್ನು ಅವರ ಪುತ್ರ ಶ್ರೀ ಎಂ. ಎಸ್. ಭಾಸ್ಕರ್ ಈ ಕೃತಿಯಲ್ಲಿ ಸಂಕಲಿಸಿದ್ದಾರೆ.

2. **ದಾಸ ಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು** : (ಒಂದು ಸಮೀಕ್ಷೆ).
ಲೇಖಕರು : ಸೈಯದ್ ಮುಯಿನ್. ಪ್ರಕಾಶಕರು : ಓದು-ಬರಹ-ಬಳಗ, 339, 9ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಚೆನ್ನಮ್ಮನ ಕೆರೆ ಅಚ್ಚುಕಟ್ಟು, ಬನಶಂಕರಿ 3ನೇ ಘಟ್ಟ, ಬೆಂಗಳೂರು-560 085. ಪ್ರಕಟಣೆ : 2011, (ಪ್ರಥಮ ಮುದ್ರಣ), ಪುಟಗಳು : 156. ಬೆಲೆ : ರೂ. 100/-

3. **'ಉದ್ಧಟ ಉವಾಚ'** : (ಪದ್ಯ-ಗದ್ಯ ಸಂಕಲನ) ಲೇಖಕರು: ಕಾನ್‌ಸೇನ್. ಮುದ್ರಣ: ಶ್ಯಾಮಲಾ ಗ್ರಾಫಿಕ್ಸ್. ಪ್ರಕಟಣೆ: 2011. ಪುಟಗಳು: 70, ಬೆಲೆ : ರೂ. 51.

4. **ಮಾರುಕಟ್ಟೆ ಪ್ರಕ್ರಿಯೆಯಲ್ಲಿ ಜಾಹೀರಾತು** : ಲೇಖಕರು: ಎಸ್. ಅನಿಲ್‌ಕುಮಾರ್. ಪ್ರಕಟಣೆ : ಉದಯಭಾನು ಕಲಾ ಸಂಘ, ಬೆಂಗಳೂರು-560 019. ಪ್ರಥಮ ಮುದ್ರಣ: 2011. ಪುಟಗಳು : 80. ಬೆಲೆ : ರೂ. 45/-

5. **ಸಮಗ್ರ ಪ್ರಬಂಧ ಗುಚ್ಛ** : ಲೇಖಕರು : ಕೆ. ಗೋಪಾಲಕೃಷ್ಣರಾವ್. ಪ್ರಕಾಶಕರು : ತುಲನ ಪ್ರಕಾಶನ, ನಂ. 7, ಫಸ್ಟ್ ಶಾಪ್ ಲೇನ್, ಟಾಟಾ ಸಿಲ್ಕ್ ಫಾರಂ, ಬೆಂಗಳೂರು-560 004. ಪ್ರಕಟಣೆ : 2011. ಪುಟಗಳು : 152. ಬೆಲೆ : ರೂ. 100/-.

6. **ಮಣ್ಣಿಂದ ಕಾಯ** : (ದಾಸ ಸಾಹಿತ್ಯ ಮೀಮಾಂಸೆ). ಲೇಖಕರು : ಡಾ॥ ಎಚ್. ಎನ್. ಮುರಳೀಧರ. ಪ್ರಕಟಣೆ : ಉದಯಭಾನು ಕಲಾಸಂಘ, ಬೆಂಗಳೂರು-560 019. ಪುಟಗಳು : 48. ಪ್ರಕಟಣೆ : 2011. ಬೆಲೆ : ರೂ. 45/-

೭. **ಸದನವನ್ನು ಗೆದ್ದವರು** : (ಕಾದಂಬರಿ). ಲೇಖಕರು : ಎಸ್. ಸತ್ಯನಾರಾಯಣ ರಾವ್.ಪ್ರಕಾಶಕರು : ೨೯-೧, ಪ್ರೇಮ್ ಸಿಲ್ಕ್ ಹೌಸ್ ಬಿಲ್ಡಿಂಗ್, ೩ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು-೫೬೦ ೦೫೦. ಬೆಲೆ : ರೂ. ೯೦/-.

೮. **ಕೆನ್‌ಸಿಂಗ್‌ಟನ್ ಪಾರ್ಕ್ :** (ವ್ಯಕ್ತಿಚಿತ್ರ)–ಲೇಖಕರು : ಕೆ. ಗೋಪಾಲಕೃಷ್ಣರಾವ್. ಪ್ರಕಾಶಕರು : 'ತನು–ಮನ', ಹೆಚ್.ಐ.ಜಿ. ೧೨೬೭, 'ಕಾವ್ಯಲೋಕ' ೧ನೇ ತಿರುವು, ೨ನೇ ಹಂತ, ಶ್ರೀರಾಮಪುರ ಬಡಾವಣೆ, ಮೈಸೂರು–೨೩. ಬೆಲೆ : ರೂ. ೧೦೦/–ಪುಟಗಳು: ೧೫೬. ಪ್ರಕಟಣೆ : ೨೦೧೧. ೨ನೇ ಮುದ್ರಣ.

೯. **ಶ್ರೀ ಶಂಕರ ದಿಗ್ವಿಜಯ :** (ಗದ್ಯಾನುವಾದ)ಲೇಖಕರು: ದಿ॥ ಜಿ. ಎಸ್. ಆದಿಶೇಷಯ್ಯ. ಪ್ರಕಾಶಕರು: ಕೀರ್ತನಶ್ರೀ ಪ್ರಕಾಶನ, ೨೨, ಪಾರ್ಕ್ ಏರಿಯಾ, ೯ನೇ 'ಎ' ಕ್ರಾಸ್, ಹೊಂಬೇಗೌಡನಗರ, ಬೆಂಗಳೂರು–೫೬೦ ೦೨೭. ಬೆಲೆ : ರೂ. ೧೯೦/– ಮುದ್ರಣ : ೨೦೧೧. ಪುಟಗಳು : ೧೧+೧೬೦.

೧೦. **ಕೆರೆಗಳು ಬತ್ತಿದಾಗ ಜಲ ಸಮಸ್ಯೆ :** (ಉನ್ನತ ಅಧ್ಯಯನ ಮಾಲೆ–೩). ಲೇಖಕರು : ಬಿ. ಆರ್. ಅನಂತರಾಮು.
ಪ್ರಕಾಶಕರು : ಉದಯಭಾನು ಕಲಾಸಂಘ (ನೋಂ) ಬೆಂಗಳೂರು–೫೬೦ ೦೧೯. ಬೆಲೆ : ರೂ. ೪೫/– ಪುಟಗಳು : ೧೨–೫೨. ಮೊದಲ ಮುದ್ರಣ : ೨೦೧೦.

೧೧. **ಕನ್ನಡ ಬರವಣಿಗೆ ಪರಿಷ್ಕರಣೆ :** ಲೇಖಕರು : ಮೂರೂರು ಚಂದ್ರ. ಪ್ರಕಟಣೆ : ಮೂರೂರು ಚಂದ್ರ, '೫೫೫' 'ಎ' 'ವಾದಿರಾಜ ಕೃಪ', ೬ನೇ ಮುಖ್ಯರಸ್ತೆ, ೮ನೇ ಅಡ್ಡರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–೫೬೦ ೦೬೦.
ಬೆಲೆ: ೨೦/– ಮುದ್ರಣ ೨೦೧೧. ಪುಟಗಳು : ೪೮.

೧೨. **'ಮುಕ್ತಕ ದಿಂಡಮ',** ಸಂಪಾದಕರು : ಎಸ್. ರಾಮಪ್ರಸಾದ್. ಪ್ರಕಟಣೆ : ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್ (ರಿ.) ೬೫೫, ಕಾಶಿಪತಿ ಅಗ್ರಹಾರ, ಚಾಮರಾಜ ಜೋಡಿ ರಸ್ತೆ, ಮೈಸೂರು–೨೪. ಪುಟಗಳು : ೪೬. ಬೆಲೆ : ರೂ. ೧೫/– ಮುದ್ರಣ : ೨೦೧೧

೧೩. **ಶ್ರೀ ಶಂಕರ್ ದಿಗ್ವಿಜಯ (ಗದ್ಯಾನುವಾದ)** (ಶ್ರೀ ವಿದ್ಯಾರಣ್ಯ ವಿರಚಿತ). ಲೇಖಕರು : ದಿ॥ ಜಿ. ಎಸ್. ಆದಿಶೇಷಯ್ಯ. ಪ್ರಕಾಶಕರು : ಕೀರ್ತನಶ್ರೀ ಪ್ರಕಾಶನ, ನಂ. ೨೨, ಪಾರ್ಕ್ ಏರಿಯ, ೯ನೇ 'ಎ' ಕ್ರಾಸ್, ಹೊಂಬೇಗೌಡನಗರ, ಬೆಂಗಳೂರು–೨೭. ಪುಟಗಳು: ೧೨+೧೬೦. ಬೆಲೆ : ರೂ. ೧೮೦/– ಪ್ರಥಮ ಮುದ್ರಣ: ೨೦೧೧.

೧೪. **ಅಜಾತ ಶತ್ರು ಜಿ. ನಾ.** –ಲೇ–ನೇ.ಭ. : (ಜಿ. ನಾರಾಯಣ ಅವರ ಪರಿಚಯ) ಬೆಲೆ–ರೂ. ೪೦/–, ವರ್ಷ–೨೦೧೧, ಪುಟ–೮೬. ಪ್ರಕಾಶಕರು–ಕನ್ನಡ ಸಾಹಿತ್ಯ ಪರಿಷತ್ತು.
ದೂರವಾಣಿ–೯೪೪೪೮೬೮೬೩೩೮.

೧೫. **ಸಿರಿ ಭೂವಲಯದ ಒಳ ನೋಟ** : ಲೇ–ಸುಧಾರ್ಥಿ ಹಾಸನ, ಬೆಲೆ–ರೂ. ೪೫/–, ವರ್ಷ–೨೦೧೨, ಪುಟ–೧೨೮, ಪ್ರಕಾಶಕರು–ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್
ದೂರವಾಣಿ–೯೪೪೯೪೬೨೮೦.

೧೬. **ರತ್ನಕರಂಡಕ ಶ್ರಾವಕಾಚಾರ** : ವಿದ್ಯಾರ್ಥಿಗಳಿಗಾಗಿ, ಲೇ–ಜೀವಂಧರ ಕುಮಾರ, ಕು ಹೊತಪೇಟೆ,
ಬೆಲೆ ; ರೂ. ೩೬, ವರ್ಷ–೨೦೧೨, ಪುಟ–೧೪೪. ಪ್ರಕಾಶಕರು–

೧೮. **ಸಮ್ಯಕ್ತ್ವ ಕೌಮುದಿ** : ಲೇ–ಎರ್ತೂರು ಶಾಂತರಾಜ ಶಾಸ್ತ್ರಿಗಳು, ಬೆಲೆ–ರೂ. ೩೬, ವರ್ಷ–೨೦೧೨, ಪುಟ–೧೯೨, ಪ್ರಕಾಶಕರು–ಪಂಡಿತರತ್ನ ಎ. ಶಾಂತರಾಜ ಶಾಸ್ತ್ರಿ ಟ್ರಸ್ಟ್

೧೯. **ಭಕ್ತಮರಾದಿ ಪಂಚಸ್ತೋತ್ರ ಭಾವ ಪ್ರಕಾಶಿಕಾ** : ಲೇ–ಎರ್ತೂರು ಶಾಂತರಾಜ ಶಾಸ್ತ್ರಿಗಳು, ಬೆಲೆ–ರೂ.೩೬/–, ಪುಟ–೧೧೦, ವರ್ಷ–೨೦೧೨, ಪ್ರಕಾಶಕರು–

೨೦. **ನನ್ನ ಸುತ್ತ ಮುತ್ತ (ಪದ್ಯಗಳು)** : ಲೇ–ಎಂ. ಎಸ್. ಭಾಸ್ಕರ್, ಬೆಲೆ–ರೂ. ೬೦, ವರ್ಷ–೨೦೧೨, ಪುಟ–೮೮, ಪ್ರಕಾಶಕರು–ಸುಂದರ ಸಾಹಿತ್ಯ.

೨೧. **ನಯನ ಪಥ : (ಕವಿತೆಗಳ ಸಂಕಲನ)** : ಲೇ ಪ್ರೊ॥ ಡಾ. ಗೋವಿಂದರಾವ್ ಜಾಲೀಹಾಳ, ಬೆಲೆ–ರೂ.೫೦/–, ವರ್ಷ–೨೦೧೧, ಪುಟ–೫೨, ಪ್ರಕಾಶಕರು–ಮಿಹಿರಾಪ್ರಕಾಶನ ದೂರವಾಣಿ– ೨೬೫೦೦೫೩೯.

ಪುಸ್ತಕ ಪರಿಚಯ

೧. ಕವಿಗಳು ಕಂಡ ಬಿ.ಎಂ.ಶ್ರೀ :



ಸಂಪಾದಕರು : ಶ್ರೀ ಹೊ. ರಾ. ಸತ್ಯನಾರಾಯಣರಾವ್

ಪ್ರಕಾಶಕರು : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ೩ನೇ ಮುಖ್ಯ ರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-೧೯.

ಪುಟಗಳು : xxii+೧೦೦.

ಬೆಲೆ : ರೂ. ೮೦/-

ಪ್ರಕಟಣೆ : ಪ್ರಥಮ ಮುದ್ರಣ ೨೦೧೨.

ಕನ್ನಡ ನಾಡು, ನಡಿ, ಸಾಹಿತ್ಯ ಸಂಸ್ಕೃತಿಯ ಬಗ್ಗೆ ಅತೀವ ಕಾಳಜಿಯಿದ್ದ 'ಕನ್ನಡ ಕಣ್ವ', ಆಚಾರ್ಯ, 'ಶ್ರೀ' ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದ ಡಾ॥ ಬಿ.ಎಂ.ಶ್ರೀ ಅವರ ಶಿಷ್ಯರು, ವಿಶ್ವಾದ್ಯಂತ ಬಹಳ ಜನರಿದ್ದಾರೆ. ಅವರ ಅಪೂರ್ವ ಕೊಡುಗೆಗಳನ್ನು ಮೆಚ್ಚದ ಕನ್ನಡಿಗರೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು ಅವರ ಹೆಸರಿನಲ್ಲೇ ಅವರ ಶಿಷ್ಯರಾದ ಪ್ರೊ॥ ಎಂ. ವಿ. ಸೀತಾರಾಮಯ್ಯ ಸ್ಥಾಪಿಸಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸುವ ಸ್ತುತ್ಯರ್ಹ ಕಾರ್ಯದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ. ಅಂಥ ಮಹನೀಯರನ್ನು ಕುರಿತು ಬಹಳ ಅಭಿಮಾನಿಗಳು ಅವರ ಬಗ್ಗೆ ಕವನಗಳನ್ನು ರಚಿಸಿ ಅವರ ಕೊಡುಗೆಗಳನ್ನು ಅವರ ವೈಶಿಷ್ಟ್ಯವನ್ನು ಕೊಂಡಾಡಿದ್ದಾರೆ, ಸ್ತುತಿಸಿದ್ದಾರೆ. ಈ ಗ್ರಂಥದಲ್ಲಿ ಇವರನ್ನು ಕುರಿತು ೬೩ ಜನ ಸಾಹಿತಿಗಳು ಕವಿತೆಗಳನ್ನು ರಚಿಸಿದ್ದಾರೆ. ಈ ಕವನಗಳನ್ನು ಸನ್ಮಾನ್ಯ ಶ್ರೀ ಹೊ. ರಾ. ಸತ್ಯನಾರಾಯಣ ಅವರು ಬಹಳ ಶ್ರಮವಹಿಸಿ, ಕೆಲವರನ್ನು ಕಾಡಿ ಬಿ.ಎಂ.ಶ್ರೀ ಅವರ ಕವನಗಳನ್ನು ಸಂಗ್ರಹಿಸಿ ನಮ್ಮ ಪ್ರತಿಷ್ಠಾನಕ್ಕೆ ನೀಡಿ ಉಪಕರಿಸಿದ್ದಾರೆ. ಇದೊಂದು ನಿಜವಾಗಿ ಮಾಹಿತಿ ಸಂಗ್ರಹಕೋಶದಂತಿದೆ. ಅತ್ಯಮೂಲ್ಯ ಸಂಗ್ರಹವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಸಂಗ್ರಹಕಾರರಾದ ಶ್ರೀ ಹೊ. ರಾ. ಸತ್ಯನಾರಾಯಣ ಅವರನ್ನು ತುಂಬ ಅಭಿಮಾನದಿಂದ ಅಭಿನಂದಿಸುತ್ತಾ ಈ ಗ್ರಂಥವನ್ನು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪ್ರಕಟಿಸಿದೆ. ಇದು ಎಲ್ಲ ಕನ್ನಡಿಗರ ಮನೆಯಲ್ಲಿ, ಪುಸ್ತಕ ಭಂಡಾರಗಳಲ್ಲಿ ಇರಲೇಬೇಕಾದ ಕೃತಿಯಾಗಿದೆ.

೨. ಕನ್ನಡ ನವೋದಯ ಪ್ರವರ್ತಕ 'ಬಿ.ಎಂ.ಶ್ರೀ' ಅವರ ಪರಿಚಯ ಹಾಗೂ ಸೂಕ್ತಿಗಳು.



ಲೇಖಕರು : ಪ್ರೊ॥ ಡಿ. ಲಿಂಗಯ್ಯ

ಪ್ರಕಾಶಕರು : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ.


ಪುಟಗಳು : ೫೨

ಬೆಲೆ : ರೂ.೩೦/-

ಪ್ರಕಟಣೆ : ೨೦೧೨.

ಪ್ರೊ॥ ಡಿ. ಲಿಂಗಯ್ಯ ಅವರು ಹಿಂದೆ ರಚಿಸಿದ್ದ ಬಿ.ಎಂ.ಶ್ರೀ ಕುರಿತ ಗ್ರಂಥವನ್ನು ಈಗ ವಿಸ್ತೃತಗೊಳಿಸಿ ಹಲವಾರು ನೂತನ ಸೂಕ್ತಿಗಳನ್ನು ಸೇರಿಸಿ ಅದರ ವ್ಯಾಪಕತೆಯನ್ನು ಹಿಗ್ಗಿಸಿ ಅದರ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ. ಪ್ರೊ॥ ಡಿ. ಲಿಂಗಯ್ಯ ಅವರು ದಿನಾಂಕ ೧೨-೯-೨೦೧೨ ಮರಣ ಹೊಂದುವ ಮುನ್ನ ಬಹಳ ಆಸಕ್ತಿ ವಹಿಸಿ ಸಿದ್ಧಪಡಿಸಿದ್ದ ಈ ಕೃತಿ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊನೆಯ ಕೃತಿಯಾಗಿದೆ. ಈ ಶ್ಲಾಘನೀಯ ಕೃತಿ ಪ್ರತಿಯೊಬ್ಬ ಸಾಹಿತ್ಯಾಸಕ್ತರ ಗ್ರಂಥಾಲಯದಲ್ಲಿ ಇರಲೇಬೇಕಾಗಿದೆ. ಗ್ರಂಥಾಲಯ ಇಲಾಖೆ ಇದನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೊಂಡು ಎಲ್ಲಾ ಶಾಲೆಗಳಿಗೂ ಹಾಗೂ ಗ್ರಂಥಾಲಯಕ್ಕೆ ಸೇರಿಸುವ ಕಾರ್ಯ ಕೈಗೊಂಡು, ಬಿ.ಎಂ.ಶ್ರೀ ಕನ್ನಡ ನಾಡಿನ ಶ್ರೇಷ್ಠ ಕವಿ, ನಾಡು ನುಡಿಯ ಚಿಂತಕ ಎಂಬುದನ್ನು ಎಲ್ಲರ ಅವಗಾಹನೆಗೆ ತರಬಹುದಾಗಿದೆ.

೩. ಚಂದಿರ ಶಾಲೆ



ಲೇಖಕರು: ಡಾ॥ ಮುಳುಕುಂಟೆ ರಮೇಶ್.

ಪ್ರಕಾಶಕರು : ನವ ಕರ್ನಾಟಕ ಪಬ್ಲಿಕೇಷನ್ಸ್, (ಪ್ರೈ) ;ಲಿ. ಬೆಂಗಳೂರು೫೬೦ ೦೦೧

ಬೆಲೆ : ರೂ. ೪೦\-


ಪುಟಗಳು ೮೦.

ಪ್ರಕಟಣೆ ; ಮೊದಲ ಮುದ್ರಣ ೨೦೧೨.

ಮಕ್ಕಳ ಸಾಹಿತ್ಯ ಬಹಳ ಉಪೇಕ್ಷೆಗೆ ಗುರಿಯಾಗಿರುವ ಸಾಹಿತ್ಯ ಪ್ರಕಾರವಾಗಿದೆ. ಆದರೆ ಇದರ ಉಪಯುಕ್ತತೆಯನ್ನು ಮಕ್ಕಳು ಅಲ್ಲದೆ, ಮಕ್ಕಳ ಪೋಷಕರು ಅರ್ಥಮಾಡಿಕೊಂಡರೆ ಮಕ್ಕಳ ಓದುವ ಶಕ್ತಿಗೆ ಇಂಬುಕೊಟ್ಟಂತಾಗುತ್ತದೆ. ಮಕ್ಕಳ ಸಾಹಿತ್ಯಕ್ಕೆ ಹೊಯ್ಸಳ, ಕುವೆಂಪು ರಾಜರತ್ನಂ, ಪಂಜೆ ಮಂಗೇಶರಾಯರು, ಸುಬೋಧ ರಾಮರಾಯರು, ಆರ್.

ಕಲ್ಯಾಣಮ್ಮ, ಶಿವರಾಮಕಾರಂತ, ಬಿ.ಶೀ. ಪಾಂಡುರಂಗ ರಾವ್, ಸಿದ್ಧಯ್ಯ ಪುರಾಣಿಕ, ಸಿಸು ಸಂಗಮೇಶ, ಡಾ॥ ನಿರುಪಮಾ, ಎಸ್. ವಿ. ಶ್ರೀನಿವಾಸರಾವ್ ಮುಂತಾದವರು ಈ ಕ್ಷೇತ್ರವನ್ನು ಸಂಪನ್ನಗೊಳಿಸಲು ಶ್ರಮಿಸಿದ್ದಾರೆ. ಡಾ॥ ಮುಳುಕುಂಟೆ ರಮೇಶ್ ಅವರೂ ಈ ಕ್ಷೇತ್ರಕ್ಕೆ ಪ್ರವೇಶಿಸಿ ಈಗಾಗಲೇ ಜನಪ್ರಿಯ ಕೃತಿ 'ಬಣ್ಣದ ಬುಗುರಿ' ನೀಡಿ ಈಗ 'ಚಂದಿರ ಶಾಲೆ' ನೀಡುತ್ತಿದ್ದಾರೆ. ಇದರಲ್ಲಿ ೪೨ ಮಕ್ಕಳ ಮನಸ್ಸಿಗೆ ಹಿಡಿಯುವ ಶೀರ್ಷಿಕೆಗಳಾದ 'ಜೋಗುಳ', 'ಮೂರು ಕಾಗೆಗಳು', 'ಮೂರು ಬಿಳಿ ಇಲಿಗಳು', 'ಕಾಡಿನ ಹಬ್ಬ',' ಚಿಟ್ಟೆಗಳ ಜಗಳ', 'ಸಂಕ್ರಾಂತಿ', 'ಶಾಲೆಯ ಉಡುಪು', 'ಕಪ್ಪೆಯ ಹಾರು', 'ಊರಿಗೆ ಬಂದ ಆನೆ', ಮುಂತಾದವುಗಳಿವೆ. ನಾಲ್ಕು ಸಾಲುಗಳ, ಪ್ರಾಸಬದ್ಧ ಕವನಗಳು ಹಾಡಲು ಅನುಕೂಲಕರವಾಗಿದೆ ಸುಂದರ ಲಲಿತ ಭಾಷೆ, ಮಕ್ಕಳ ಮನಸ್ಸನ್ನು ಮುದಗೊಳಿಸುವುದರಲ್ಲಿ ಸಂದೇಹವಿಲ್ಲ. ಮಕ್ಕಳ ಪುಸ್ತಕ ಪ್ರಕಟಣೆಯಲ್ಲಿ ಮಂಚೂಣೆಯಲ್ಲಿರುವ ನವ ಕರ್ನಾಟಕ ಇದನ್ನು ಬಹಳ ಸುಂದರವಾಗಿ ಉತ್ತಮ ಚಿತ್ರಗಳಿಂದೊಡಗೂಡಿದಂತೆ ಮುದ್ರಿಸಿ ಮಕ್ಕಳ ಮನಸ್ಸಿಗೆ ಹಿಡಿಯುವಂತೆ ಆಕರ್ಷಕಗೊಳಿಸಿದ್ದಾರೆ. ಇದು ಹಿರಿಯರು, ಕಿರಿಯರುಗಳ ವಿವರ ಗಮನ ಸೆಳೆಯುವುದರಲ್ಲಿ ಸಂದೇಹವಿಲ್ಲ ಲೇಖಕರು ಅಭಿನಂದನಾರ್ಹರು.

೪. ಅಜಾತಶತ್ರು ಜಿ. ನಾ. (ಜಿ. ನಾರಾಯಣ ಅವರ ಪರಿಚಯ)
ಲೇಖಕರು : ನೇ ಭ. ರಾಮಲಿಂಗಶೆಟ್ಟಿ
ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.
ಪುಟಗಳು : viii+೮೬.
ಬೆಲೆ : ರೂ. ೪೦\-
ಪ್ರಕಟಣೆ : ಮೊದಲನೇ ಮುದ್ರಣ ೨೦೧೧.
೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ, ಗಂಗಾವತಿ (ಕೊಪ್ಪಳ ಜಿಲ್ಲೆ) ಸಂದರ್ಭದಲ್ಲಿ ಪ್ರಕಟಗೊಂಡಿರುವ ಕೃತಿ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸುಮಾರು ೯ ವರ್ಷ ಅಧ್ಯಕ್ಷರಾಗಿದ್ದ ನಾಡೋಜ ಜಿ. ನಾರಾಯಣ ಪ್ರತಿಷ್ಠಾನದ ಸರ್ವಾಂಗ ಬೆಳವಣಿಗೆಗೆ ಪ್ರಕರಣ



ಪೂರ್ವಕವಾಗಿ ಶ್ರಮಿಸಿ, ಆರ್ಥಿಕ ಸುಭದ್ರತೆಯ ಜೊತೆಗೆ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ರಾಷ್ಟ್ರದ್ಯಂತ ಗುರುತಿಸಿ ಕೊಳ್ಳುವಂತೆ ಬೆಳೆಸಿದವರು. ಇವರು ಬೆಂಗಳೂರು ನಗರ ಸಭೆಯ ಮೇಯರ್ ಆಗಿ ಬೆಂಗಳೂರಿನ ಬೆಳವಣಿಗೆಗೂ ಶ್ರಮಿಸಿದವರು. ಸ್ವತಂತ್ರ ಮುದ್ರಣಾಲಯ ಸ್ಥಾಪಿಸಿ 'ವಿನೋದ' ಎಂಬ ಮಾಸ ಹಾಸ್ಯ ಪ್ರಧಾನ ಪತ್ರಿಕೆಯನ್ನು ಸ್ಥಾಪಿಸಿ ೫೦ ವರ್ಷಕ್ಕೂ ಹೆಚ್ಚು ಕಾಲ ನಡೆಸಿ ವಿಕ್ರಮ ಸಾಧಿಸಿರುವ ಹೆಗ್ಗಳಿಕೆ ಇವರದು. ಶ್ರೀಯುತರು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಗೌ॥ ಅಧ್ಯಕ್ಷರಾಗಿದ್ದುದಲ್ಲದೆ, ಇದರ ಪ್ರಾರಂಭದಿಂದಲೂ ಪ್ರೊ॥ ಎಂ.ವಿ. ಸೀತಾರಾಮಯ್ಯ ನವರ ಜೊತೆ ನಿಕಟ ಸಂಪರ್ಕ ಇರಿಸಿಕೊಂಡು, ಪ್ರತಿಷ್ಠಾನ ಕಟ್ಟಿ ಬೆಳೆಸಿದ ಶ್ರೇಯಸ್ಸೂ ಇವರಿಗೆ ಸೇರುತ್ತದೆ. ಕನ್ನಡ ನೆಲ, ಜನ, ಭಾಷೆ ಸಂಬಂಧಿಸಿದ ಎಲ್ಲ ಚಳವಳಿಗಳಲ್ಲು ನೇತೃತ್ವ ವಹಿಸಿ ಕರ್ನಾಟಕದ ಗೌರವ ಹೆಚ್ಚಿಸಲು ಅಹರ್ನಿಶಿ ಶ್ರಮಿಸಿದ ಈ ಕಟ್ಟಾಳು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪತ್ರಿಕಾ ಅಕಾಡೆಮಿ, ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿದ್ದ ಹೆಗ್ಗಳಿಕೆಗೂ ಪಾತ್ರರು. ಇವರ ಜೀವನ ಪರಿಚಯವನ್ನು ಕನ್ನಡದ ಕಟ್ಟಾಳು ಹಾಗೂ ಕರ್ನಾಟಕ ರಕ್ಷಣಾ ವೇದಿಕೆಯ ಗಣ್ಯ ಸದಸ್ಯರಾದ ಶ್ರೀ ನೇ. ಭ. ರಾಮಲಿಂಗಶೆಟ್ಟಿಯವರು ಬಹಳ ಶ್ರಮವಹಿಸಿ, ಡಾ॥ ಜಿ. ನಾರಾಯಣರವರ ಸಂಪೂರ್ಣ ಜೀವನ ಚಿತ್ರವನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ ನೀಡುವ ಕೆಲಸವನ್ನು ಸ್ತುತ್ಯರ್ಹ ರೀತಿಯಲ್ಲಿ ಮಾಡಿರುತ್ತಾರೆ. ಲೇಖಕರು ಅಭಿನಂದಾರ್ಹರು, ಈ ಗ್ರಂಥ ಎಲ್ಲರ ಮನೆ ಹಾಗೂ ಎಲ್ಲಾ ಪುಸ್ತಕ ಭಂಡಾರಗಳಲ್ಲೂ ಇರಲೇಬೇಕಾದ ಸಂಗ್ರಹಯೋಗ್ಯ ಕೃತಿ.

ಅಭಿನಂದನೆಗಳು

೧. **ವರ್ಧಮಾನ ಪ್ರಶಸ್ತಿ** : (೨೦೧೧) ಡಾ॥ ನಟರಾಜ ಬೂದಾಳು ಅವರ ನಾಗಾರ್ಜುನನ ಮೂಲ ಕೃತಿಗೆ, ಅಂಕೋಲೆಯ ವಿಷ್ಣು ನಾಯ್ಕ ಅವರ 'ನೂರೆಂಟು ಕಿಟಕಿಗಳು' ಕಥಾ ಸಂಕಲನಕ್ಕೆ ವರ್ಧಮಾನ ಶ್ರೇಷ್ಠ ಪ್ರಶಸ್ತಿ, ಶ್ರೀ ಚ. ಹ. ರಘುನಾಥ, ಬೆಂಗಳೂರು ಅವರ 'ಹೊರಗೂ ಮಳೆ ಒಳಗೂ ಮಳೆ' ಕಥಾ ಸಂಗ್ರಹಕ್ಕೆ ವರ್ಧಮಾನ ಉದಯೋನ್ಮುಖ ಸಾಹಿತ್ಯ ಘೋಷಿತವಾಗಿವೆ.

೨. **'ಬಸವಶ್ರೀ' ಪ್ರಶಸ್ತಿ** : ಮುರುಘಾ ಮಠದ ವತಿಯಿಂದ ನೀಡುವ ಪ್ರತಿಷ್ಠಿತ 'ಬಸವಶ್ರೀ' ಪ್ರಶಸ್ತಿಯನ್ನು ನಿವೃತ್ತ ಐ.ಪಿ.ಎಸ್. ಅಧಿಕಾರಿ ಶ್ರೀ ಶಂಕರಮಹಾದೇವ ಬಿದರಿಯವರಿಗೆ ಪ್ರದಾನಮಾಡಲಾಗಿದೆ. (೫ ಲಕ್ಷ ನಗದು ಮತ್ತು ಫಲಕ). ಪ್ರಶಸ್ತಿ ಸ್ವೀಕರಿಸಿದ ಶ್ರೀ ಬಿದಿರಿ ಈ ಹಣವನ್ನು ಸಮಾಜದ ಯಾವುದಾದರೂ ಕಾರ್ಯಕ್ಕೆ ಬಳಸಲು ಶ್ರೀ ಶ್ರೀ ಶಿವಮೂರ್ತಿ ಮುರುಘಾ ರವರಿಗೆ ಹಿಂತಿರುಗಿಸಿದ್ದಾರೆ. (೨೫-೧೦-೧೨).

೩. **ಶಿವಕುಮಾರ ಪ್ರಶಸ್ತಿ** : (೨೦೧೨) ತಾ॥ ಸಾಣೇಹಳ್ಳಿ ಶಿವಕುಮಾರ ಕಲಾ ಸಂಘ ನೀಡುವ ಈ ಪ್ರಶಸ್ತಿ ಡಾ॥ ಕೆ. ಮರುಳಸಿದ್ದಯ್ಯ ಅವರಿಗೆ ಸಂದಿದೆ (೨೬-೧೦-೨೦೧೨) ಈ ಪ್ರಶಸ್ತಿಯನ್ನು ನವಂಬರ್ ೮, ೨೦೧[illegible]ದು ನೀಡಲಾಗಿದೆ.

೪. **ಕೊಂಕಣಿ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ** : (೨೦೧೧) ಈ ಪ್ರತಿಷ್ಠಿತ ಪ್ರಶಸ್ತಿ ಕನ್ನಡದ ಹಿರಿಯ ಸಾಹಿತಿ, ಪತ್ರಕರ್ತ ಶ್ರೀ ಶಾ.ಮಂ. ಕೃಷ್ಣರಾವ್ ಅವರಿಗೆ ಸಂದಿದೆ.

೫. **ಡಾ॥ ಎಂ. ವೀರಪ್ಪ ಮೊಯಿಲಿಯವರು** ಕೇಂದ್ರ ಸರ್ಕಾರದಲ್ಲಿ ಪೆಟ್ರೋಲಿಯಂ ಖಾತೆ ಸಚಿವರಾಗಿ ನಿಯುಕ್ತಗೊಂಡಿದ್ದಾರೆ. (೨೮-೧೦-೨೦೧೨).

೬. **ಡಾ॥ ಮಹೇಶ್ ಜೋಶಿಯವರು** ದೂರದರ್ಶನ ವಿಭಾಗದ ಉಪ ಮಹಾ ನಿರ್ದೇಶಕ ಹುದ್ದೆಯಿಂದ 'ಹೆಚ್ಚುವರಿ ಮಹಾನಿರ್ದೇಶಕರಾಗಿ ಬಡ್ತಿ ಪಡೆದಿದ್ದಾರೆ. ೧-೧೧-೨೦೧೨ರಂದು ಅಧಿಕಾರ ವಹಿಸಿ ಕೊಂಡಿರುತ್ತಾರೆ.

೭. **ರಾಜ್ಯಪ್ರಶಸ್ತಿ** : (೨೦೧೨) ಖ್ಯಾತ ಸಾಹಿತಿಗಳಾದ ಡಾ॥ ಎಚ್. ಎಸ್. ರಾಘವೇಂದ್ರರಾವ್, ಶ್ರೀ ಬೊಳುವಾರು ಮಹಮದ್ ಕುಂಞ, ನಿರಂಜನ ವಾಲಿ ಶೆಟ್ಟರು, ಸತ್ಯಾನಂದ ಪಾತ್ರೋಟ, ಜಾಣಗೆರೆ ವೆಂಕಟರಾಮಯ್ಯ ಅವರುಗಳು ಭಾಜನರಾಗಿದ್ದಾರೆ.

೮. **ನೃಪತುಂಗ ಪ್ರಶಸ್ತಿ** : ಕ.ಸಾ.ಪ. ಮತ್ತು ಬಿ.ಎಂ.ಟಿ.ಸಿ. ಜಂಟಿಯಾಗಿ ನೀಡುವ ಪ್ರಶಸ್ತಿಗೆ ಖ್ಯಾತ ಸಾಹಿತಿ ಸಾ.ರಾ. ಅಬೂಬಕ್ಕರ್ ಆಯ್ಕೆಗೊಂಡಿದ್ದಾರೆ. (೭.೫೦ ಲಕ್ಷ ರೂಪಾಯಿ ನಗದು ಮತ್ತು ಫಲಕ).

ಅಚ್ಚಾದ ಪುಸ್ತಕ — ತೆರೆದ-ಅಂಚೆ

ಶ್ರೀಮತಿ/ಶ್ರೀ..

....

....

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೧೯
ದೂರವಾಣಿ : ೨೬೬೧೫೮೭೭

ಮುದ್ರಕರು : 'ಇಳಾ ಮುದ್ರಣ', ನಂ. ೩೬, ೪೦ ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು-೫೬೦ ೦೨೬, ದೂರವಾಣಿ : ೨೬೭೫೭೧೫೯